**<u>3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.</u>**

**<u>ಎಸ್.ಸಿ. ಸಂಖ್ಯೆಃ 39/2013</u>**

ದಿನಾಂಕಃ 28.09.2021
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಚಾಸಾ - 25 ಪ್ರಾಸಾ - 11

| | | |
|---|---|---|
| ಹೆಸರು | ಃ | ರಾಜು ಎಂ.ಸಿ. |
| ತಂದೆಯ/ಗಂಡನ ಹೆಸರು | ಃ | ಚಿಕ್ಕಮೂಗೇಗೌಡ |
| ವಯಸ್ಸು | ಃ | 40 ವರ್ಷ |
| ಉದ್ಯೋಗ | ಃ | ಮುಖ್ಯಪೇದೆ, ಹಾರೋಹಳ್ಳಿ ಪೊಲೀಸ್ ಠಾಣೆ |
| ವಾಸಸ್ಥಳ | ಃ | ಚನ್ನಪಟ್ಟಣ |

**<u>ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

ನಾನು 2011 ರಿಂದ 2015 ರವರೆಗೆ ರಾಮನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ, ದಿನಾಂಕ 20.04.2012 ರಂದು ನನ್ನನ್ನು ಮತ್ತು ಮಹಿಳಾ ಪಿಸಿ 336 ರವರನ್ನು ಆರೋಪಿಗಳ ತಲಾಷೆಗೆಂದು ನೇಮಿಸಲಾಗಿತ್ತು. ಬಾತ್ಮಿದಾರರ ಮಾಹಿತಿಯಂತೆ 2 ನೇ ಆರೋಪಿ ಸರೋಜಮ್ಮ ಗೊಲ್ಲರದೊಡ್ಡಿ ಸ್ಥಳದಲ್ಲಿ ಇರುವುದಾಗಿ ತಿಳಿಯಿತು. ಸದರಿ ದಿನದ ಬೆಳಿಗ್ಗೆ 6.30 ರ ಸಮಯದಲ್ಲಿ ಗೊಲ್ಲರದೊಡ್ಡಿ ಸ್ಥಳದಲ್ಲಿ 2 ನೇ ಆರೋಪಿಯನ್ನು ನಮ್ಮಗಳ ವಶಕ್ಕೆ ಪಡೆದು, ಅದೇ ದಿನ ಬೆಳಿಗ್ಗೆ 7.30 ರ ಸಮಯಕ್ಕೆ ಅಂದಿನ ತನಿಖಾಧಿಕಾರಿ ರಾಮನಗರದ ಆರಕ್ಷಕ ಉಪ ನಿರೀಕ್ಷಕರ ಸಮಕ್ಷಮ ಹಾಜರುಪಡಿಸಿದೆವು.

3. ಈ ಬಗ್ಗೆ ನಾವು ಪ್ರತ್ಯೇಕ ವರದಿ ನೀಡಿದ್ದೇವೆ. ಸದರಿ ವರದಿಯನ್ನು ನನ್ನಿಂದ ನಿಶಾನೆ ಪಿ 23 ಎಂದು, ಅದರಲ್ಲಿರುವ ನನ್ನ ರುಜುವನ್ನು ನಿಶಾನೆ ಪಿ 23(ಎ) ಎಂದು ಗುರುತು ಮಾಡಲಾಯಿತು. ನಮ್ಮಿಂದ ನಿರ್ಬಂಧಿಸಲ್ಪಟ್ಟ ಸರೋಜಮ್ಮ ಈ ದಿನ ನ್ಯಾಯಾಲಯದ ಮುಂದೆ ಇದ್ದಾರೆ.

**<u>ಪಾಟೀ ಸವಾಲುಃ</u> ಶ್ರೀಮತಿ.ಕೆ.ಆರ್.ಬಿ. ವಕೀಲರಿಂದ – ಆರೋಪಿಗಳ ಪರವಾಗಿಃ-**

4. ನಾನು ಮುಖ್ಯವಿಚಾರಣೆಯಲ್ಲಿ ನುಡಿದಂತೆ ಆರೋಪಿ ಸರೋಜಮ್ಮನನ್ನು ಗೊಲ್ಲರಹಟ್ಟಿ ಸ್ಥಳದಲ್ಲಿ ನಮ್ಮ ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. ನಾವುಗಳೇ ಅವರನ್ನು ಠಾಣೆಗೆ ಕರೆಸಿಕೊಂಡು ಠಾಣೆಯಲ್ಲಿ ಅವರನ್ನು ದಸ್ತಗಿರಿ ಕ್ರಮಕ್ಕೆ ಒಳಪಡಿಸಿದ್ದೇವೆ ಎಂದರೆ ಸರಿಯಲ್ಲ. ಸೂಚಿಸಿದ ಕಾರಣಕ್ಕೆ ನನ್ನ ಮುಖ್ಯವಿಚಾರಣೆಯ ಹೇಳಿಕೆ ಮತ್ತು ನಿಶಾನೆ ಪಿ 23 ರ ವರದಿ ಅಸತ್ಯ ಮತ್ತು ಕಾಲ್ಪನಿಕ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಸಿದ್ದಲಿಂಗ ಪ್ರಭು)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.